ಮತ್ತು ಮನೆಯ ಕೋಣೆಗಳನ್ನು ಸೇರಿಸಿದರೆ ಒಟ್ಟು ಒಂಬತ್ತು ಬೀಗಗಳನ್ನು ಹಾಕಬೇಕು!

ಬೇರೆಲ್ಲ ವಿಷಯದಲ್ಲಿ ನನ್ನನ್ನು ಬೇಜವಾಬ್ದಾರಿ ಮನುಷ್ಯ ಎಂದು ಟೀಕಿಸುವ ನನ್ನಾಕೆ ಇಬ್ಬರೂ ಒಟ್ಟಿಗೆ ಪರ ಊರಿಗೆ ಹೋಗುವಾಗ ಮನೆಗೆ ಬೀಗ ಹಾಕುವ ಜವಾಬ್ದಾರಿಯನ್ನು ನನಗೆ ನೀಡುತ್ತಾಳೆ. ನಾನು ಚೂರೂ ಬೇಸರ ಪಡದೆ ಒಂಬತ್ತು ಬೀಗಗಳನ್ನು ಬೇಗ ಬೇಗ ಹಾಕುತ್ತೇನೆ. ಇದಕ್ಕೆ ಕಾರಣ ಹಲವು ವರ್ಷಗಳ ಕಾಲ ಬ್ಯಾಂಕಿನ ಭದ್ರತಾ ಕೊಠಡಿಯ ಜಂಟಿ ಕಸ್ಟೋಡಿಯನ್ ಆಗಿ ನನಗಿರುವ ಅನುಭವ. ಬ್ಯಾಂಕಿನಲ್ಲಿ ನಗದು ಮತ್ತು ಲಾಕರುಗಳನ್ನು ಹೆಚ್ಚು ದಪ್ಪದ, ಗಟ್ಟಿಮುಟ್ಟಾದ ಗೋಡೆಗಳುಳ್ಳ ಭದ್ರತಾ ಕೋಣೆಯಲ್ಲಿ ಇಟ್ಟಿರುತ್ತಾರೆ. ಅದರ ಬೀಗದ ಕೈಗಳು ಇಬ್ಬರು ಅಧಿಕಾರಿಗಳ ಬಳಿ ಇರಬೇಕೆಂಬ ನಿಯಮವಿದೆ. ಒಬ್ಬರು ಕೀಲಿ ಕೈ ಹಾಕಿ ತಿರುಗಿಸಿದ ನಂತರ ಇನ್ನೊಬ್ಬರು ತಮ್ಮ ಬಳಿ ಇರುವ ಕೈಗಳನ್ನು ಹಾಕಿ ತಿರುಗಿಸಿದರೆ ಮಾತ್ರ ಬಾಗಿಲು ತೆರೆದುಕೊಳ್ಳುತ್ತದೆ. ಹೀಗಾಗಿ ಕೀ ಇರುವ ಇಬ್ಬರೂ ಶಾಖೆ ಆರಂಭವಾಗುವ ಸಮಯಕ್ಕಿಂತ ತುಸು ಮುಂಚಿತವಾಗಿ ಬರಬೇಕು. ಒಬ್ಬರು ತಡವಾಗಿ ಬಂದರೂ ಗ್ರಾಹಕರು ನಗದು ಪಡೆಯಲು ಕಾಯುವ ಪರಿಸ್ಥಿತಿ ಉಂಟಾಗುತ್ತದೆ.

ಬ್ಯಾಂಕಿನ ಡಬಲ್ ಲಾಕ್ ಬೀಗದ ಕೈ ಇರುವವರು ರಜೆಯಲ್ಲಿ ಹೋಗುವಾಗ ಹಾಗೇ ಕೈ ಬೀಸಿಕೊಂಡು ಹೋಗುವಂತಿಲ್ಲ. ತಮ್ಮ ಬಳಿ ಇರುವ ಬೀಗದ ಕೈಗಳನ್ನು ಇನ್ನೊಬ್ಬ ಅರ್ಹ ಉದ್ಯೋಗಿಗಳ ಕೈಗೆ ಹಸ್ತಾಂತರಿಸಿ ಹೋಗಬೇಕು. ಶಾಖೆಯಲ್ಲಿ ಒಬ್ಬರೇ ಅಧಿಕಾರಿ ಇದ್ದರೆ ಒಂದು ಕೀ ಗೊಂಚಲನ್ನು ಹಿರಿಯ ಗುಮಾಸ್ತರಿಗೆ ಕೊಡಬಹುದು. ಇಲ್ಲದಿದ್ದರೆ ಬೇರೆ ಶಾಖೆಯಿಂದ ಅಧಿಕಾರಿಗಳನ್ನು ಕರೆಸಬೇಕು. ಭದ್ರತಾ ಕೊಠಡಿಯ ಕೀಲಿ ಕೈ ಕಳೆದುಹೋದರೆ ಅದಕ್ಕೆ ಕಳೆದುಹಾಕಿದವರೇ ಹೊಣೆಯಾಗುತ್ತಾರೆ. ನಕಲಿ ಕೀ ಮಾಡಿಸುವಂತಿಲ್ಲ. ಭದ್ರತಾ ಕೊಠಡಿಯ ಎಲ್ಲಾ ಬೀಗಗಳನ್ನು ಬದಲಿಸಬೇಕು. ಅದು ತುಂಬಾ ದುಬಾರಿಯಾದ್ದರಿಂದ ಆ ವೆಚ್ಚವನ್ನು ಉದ್ಯೋಗಿಯ ಸಂಬಳದಿಂದ ಕಂತುಗಳಲ್ಲಿ ವಸೂಲಿ ಮಾಡಲಾಗುವುದು. ಹೀಗಾಗಿ ಬೀಗದ ಕೈ ತೆಗೆದುಕೊಳ್ಳುವ ಸಂದರ್ಭ ಬಂದಾಗ ಶಾಖೆಯ ಉದ್ಯೋಗಿಗಳು ತಪ್ಪಿಸಿಕೊಳ್ಳಲು ಮದುವೆಯ ಮನೆಯ ಬೀಗರ ಹಾಗೆ ಏನಾದರೂ ತಕರಾರು ತೆಗೆಯುತ್ತಾರೆ.

ಕಾ ಕಾ ಅನ್ನೋದು ಕಾಗೆ
ಕೂ ಕೂ ಅನ್ನೋದು ಕೋಗಿಲೆ
ಕೀ ಕೀ ಅನ್ನೋರು ಯಾರು?
ಬೀಗದ ಕೈ ಕಳೆದೋರು!

ಅನ್ನುವುದು ಸುಮತೀಂದ್ರ ನಾಡಿಗರ ಚುಟುಕು.

ಬೀಗದ ಕೈಗಳನ್ನು ಕೀ ಚೈನಿಗೆ ಹಾಕಿ, ಎಲ್ಲಾ ಕೀಗಳನ್ನು ಬಾಗಿಲಿನ ಬಳಿ ಕೀ ಹೋಲ್ಡರಿನಲ್ಲಿಟ್ಟರೆ ಕೀ ಕಳೆದು ಹೋಗುವ, ಕೀ ಕೀ ಎಂದು ಕೀರ್ವಾಣಿ ರಾಗದಲ್ಲಿ ಕಿರುಚಾಡುತ್ತ ಕೀ ಹುಡುಕುವ ಪರಿಸ್ಥಿತಿ ಬರುವುದಿಲ್ಲ. ಕೀ ಚೈನ್ ಮತ್ತು ಕೀ ಹೋಲ್ಡರುಗಳನ್ನು ಸಾಮಾನ್ಯವಾಗಿ ಯಾರೂ ಕೊಳ್ಳುವುದಿಲ್ಲ. ಏಕೆಂದರೆ ಅವುಗಳನ್ನು ಯಾರಾದರೂ ಉಡುಗೊರೆಯಾಗಿ ಕೊಟ್ಟಿರುತ್ತಾರೆ. ಕೆಲವರು ಬೀಗದ ಕೈ ಕಳೆದುಹೋಗಬಾರದೆಂದು ಅದನ್ನು ಜನಿವಾರ/ಶಿವದಾರಕ್ಕೆ ಕಟ್ಟಿಕೊಳ್ಳುವುದೂ ಉಂಟು.

ದಾಂಪತ್ಯದಲ್ಲಿ ಹೆಂಡತಿ ಮತ್ತು ಗಂಡ ಇಬ್ಬರೂ ಸಮಾನರು. ಅದೇ ರೀತಿ ಕೀಲಿ ಹಾಗೂ ಅದರ ಕೈ ಎರಡೂ ಮುಖ್ಯ. ಬೀಗವಿಲ್ಲದ ಕೀ ಮತ್ತು ಕೀ ಇಲ್ಲದ ಬೀಗ ನಿಷ್ಪ್ರಯೋಜಕ. ಆದರೂ ನಾವು ಬೀಗಕ್ಕಿಂತ ಅದರ ಕೀಗಳಿಗೆ ಹೆಚ್ಚು ಮಹತ್ವ ನೀಡಿದ್ದೇವೆ ಅನ್ನಿಸುತ್ತದೆ. ನನ್ನ ಮಾತಿಗೆ ಕೀಗಳ ಕೀರ್ತಿಯನ್ನು ಹೆಚ್ಚಿಸುವ ಕೀ ನೋಟ್ ಅಡ್ರೆಸ್, ಕೀ ಪೋಸ್ಟ್, ಕೀ ವರ್ಡ್ಸ್, ವಿಸ್–ಕೀ ಮುಂತಾದವುಗಳೇ ಸಾಕ್ಷಿ! ರಾಜಕೀಯದಲ್ಲೂ ಕೀ ಇದೆ. ಮರು ಆಯ್ಕೆ ಬಯಸಿ ಚುನಾವಣೆಗೆ ನಿಂತ ಕೆಲವು ರಾಜಕಾರಣಿಗಳು ಘೋಷಿಸುವ ಸಂಪತ್ತಿನ ವಿವರ ನೋಡಿದಾಗ ನನಗೆ ಅನ್ನಿಸುವುದು:

ಐದು ವರ್ಷಗಳಲ್ಲಿ
ಹೇಗೆ ಗಳಿಸುತ್ತಾರೆ
ಇಷ್ಟೊಂದು ಐಶ್ವರ್ಯ?
ರಾಜಕೀಯ ಅಂದರೆ
ಕುಬೇರನ ಖಜಾನೆಯ keyಯಾ?

ತಂತ್ರಜ್ಞಾನದಲ್ಲಾದ ಕ್ರಾಂತಿಯಿಂದ ಇತರ ಕ್ಷೇತ್ರಗಳಂತೆ ಬೀಗಗಳಲ್ಲೂ ಹೊಸ ಹೊಸ ಆವಿಷ್ಕಾರಗಳು ಆಗಿವೆ. ಮನೆಗಳ ಬಾಗಿಲಿಗೆ ಜೋತಾಡುವ ಪ್ಯಾಡ್ ಲಾಕುಗಳ ಬದಲು ಹೊರಗೆ ಕಾಣಿಸದ ಬೀಗಗಳು ಬಂದಿವೆ. ಆಧುನಿಕ ಹೋಟೆಲ್‌ಗಳಲ್ಲಿ ಕೊಠಡಿಗಳಿಗೆ ಕೀಲಿಯಾಗಲಿ, ಕೀಯಾಗಲೀ ಇರುವುದಿಲ್ಲ. ಬಾಗಿಲಿನ ಡಿಜಿಟಲ್ ಬೀಗ ಕಾರ್ಡ್ ತೋರಿಸಿದರೆ ಮಾತ್ರ ತೆರೆದುಕೊಳ್ಳುತ್ತದೆ. ಕಾರ್ಡಿನೊಳಗಿರುವ ಸಿಮ್ ಕೀಲಿ ಕೈ ಕಾರ್ಯವನ್ನು ನಿರ್ವಹಿಸುತ್ತದೆ. ಸಿಮ್ ಅಂದಾಗ ಆಲಿಬಾಬಾ ಮತ್ತು ನಲ್ವತ್ತು ಕಳ್ಳರ ಕತೆ ನೆನಪಾಯಿತು. ಅಲ್ಲೂ ಚಿನ್ನಾಭರಣಗಳಿರುವ ಗುಹೆಯ ಬಾಗಿಲಿನ ಬೀಗ ಕಾಣುವುದಿಲ್ಲ. ‘ಖುಲ್ ಜಾ ಸಿಮ್ Sim’ ಅಂದಾಗ ಗುಹೆಯ ಬಾಗಿಲು ತೆರೆದುಕೊಳ್ಳುತ್ತದೆ.

ಮೊಬೈಲಿನ ಬೀಗಕ್ಕೆ ಪಾಸ್‌ವರ್ಡೇ ಕೀ. ಅದು ಯಾವುದೋ ಸಂಖ್ಯೆ ಅಥವಾ ಆಕಾರ ಆಗಿರಬಹುದು. ಮಾಲೀಕನ ಮುಖ ಅಥವಾ ಸ್ವರದ ಮೂಲಕ ತೆರೆದುಕೊಳ್ಳುವ ಬಯೊಮೆಟ್ರಿಕ್ ಲಾಕಿಂಗ್ ವ್ಯವಸ್ಥೆಯೂ ಮೊಬೈಲಿನಲ್ಲಿದೆ. ವಿವಿಧ Appಗಳು ಮತ್ತು ಕಂಪ್ಯೂಟರ್ ಮೂಲಕ ನಾವು ನಡೆಸುವ ಎಲ್ಲಾ ವ್ಯವಹಾರಗಳಲ್ಲಿ ಯೂಸರ್ ಐಡಿ, ಪಾಸ್‌ವರ್ಡ್, ಒಟಿಪಿ, ಪಿನ್ ಇತ್ಯಾದಿಗಳು ಬೀಗದ ಕೈಗಳ ಹೊಸ ರೂಪ ಅನ್ನಬಹುದು. ಈ ಕೀಗಳನ್ನು ವಿಸ್ಕಿ ಕುಡಿಸಿದರೂ ಇನ್ನೊಬ್ಬರೊಂದಿಗೆ ಹಂಚಿಕೊಳ್ಳಬಾರದು. ತಂತ್ರಜ್ಞಾನದ ಸಹಾಯದಿಂದ ಬೀಗದ ಭದ್ರತೆ ಹೆಚ್ಚಾಗಿರುವುದು ನಿಜ. ಕಳ್ಳರೂ ತಂತ್ರಜ್ಞಾನದ ಬಲದಿಂದ ಕದಿಯಲು ಹೊಸ ಹೊಸ ತಂತ್ರಗಳನ್ನು ಬಳಸುತ್ತಾರೆ. ಹೀಗಾಗಿ ಕೆಲವರು ಮನೆಗೆ ಅತ್ಯುತ್ತಮ ಬೀಗ ಇದ್ದರೂ, ಕಳ್ಳರು ಬೀಗ ಮುರಿಯದಂತೆ ಕಾಯಲು ವಾಚ್‌ಮ್ಯಾನನ್ನು ನೇಮಿಸಿಕೊಳ್ಳುತ್ತಾರೆ!

ನನ್ನಂಥ ಹಿರಿಯ ನಾಗರಿಕರು ಹೊರಗೆ ಹೋಗುವಾಗ ಮನೆಗೆ ಮಾತ್ರ ಬೀಗ ಹಾಕಿದರೆ ಸಾಲದು. ಏನೇನೋ ಮಾತಾಡದಂತೆ, ನಾಲಿಗೆ ಚಪಲದಿಂದ ಸಿಕ್ಕಿದ್ದನ್ನೆಲ್ಲ ಮುಕ್ಕದಂತೆ ಬಾಯಿಗೂ ಬೀಗ ಹಾಕಿಕೊಳ್ಳುವುದು ಉತ್ತಮ.

ಮುಗಿಸುವ ಮುನ್ನ:
ಅತ್ಯಂತ ಭದ್ರ ಈ ಬೀಗ
ಇದು ಹೀಗೇ ಇರಬೇಕು
ಮೂರಲ್ಲ ನೂರು ಸಲ
ಹೇಳಿದರೂ ತಲಾಕು
ಮುರಿಯುವುದಿಲ್ಲ ನಮ್ಮ
ದಾಂಪತ್ಯವೆಂಬ ಲಾಕು!



ಪ್ರತಿಕ್ರಿಯಿಸಿ: feedback@sudha.co.in